# ಪರಸ್ಪರ ಹಂಚಿ ತಿನ್ನಿ



ದಟ್ಟ ಕಾಡೊಂದರಲ್ಲಿ ಒಂದು ಮುದಿ ಸಿಂಹವೂ, ಒಂದು ಚಿರತೆಯೂ ವಾಸಿಸುತ್ತಿದ್ದು ಪರಸ್ಪರ ಗೆಳೆತನವನ್ನು ಕಾಯ್ದುಕೊಂಡಿದ್ದವು. ಚಿರತೆಯು ಯೌವನಾವಸ್ಥೆಯಲ್ಲಿದ್ದರೂ ಮುದಿಯಾದ ಸಿಂಹಕ್ಕೆ ಹೆದರುತ್ತಿತ್ತು. ಸಿಂಹ ತನ್ನ ಬಲಿಷ್ಠವಾದ ಪಂಜದಿಂದ ಒಂದೇಟು ಹಾಕಿದರೂ ತಾನು ಸಾಯಬಹುದು ಎಂಬ ಹೆದರಿಕೆ ಚಿರತೆಗೆ ಇತ್ತು. ಹೀಗಾಗಿ ಈ ಎರಡು ಪ್ರಾಣಿಗಳಲ್ಲಿ ಹೊಂದಾಣಿಕೆಯಿತ್ತು.

ಒಮ್ಮೆ ಈ ಎರಡೂ ಪ್ರಾಣಿಗಳಿಗೆ ಯಾವುದೇ ಪ್ರಾಣಿಯ ಬೇಟೆ ಸಿಗದೆ ನಿರಾಶೆಗೊಂಡು ಕಾಡಿನಲ್ಲಿ ತಿರುಗುತ್ತಿದ್ದವು. ಆಗೊಂದು ಮರಿ ಜಿಂಕೆ ಕಂಡುಬಂತು. ಚಿರತೆ ಜಿಂಕೆ ಮರಿಯನ್ನು ಓಡಿಸಿಕೊಂಡು ಹೋಗಿ ಅದನ್ನು ಹಿಡಿಯಿತು.

ಆಗ ಸಿಂಹ ತಾನು ಮೃಗರಾಜನಾಗಿರುವುದರಿಂದ ಆ ಬೇಟೆಯಲ್ಲಿ ತನಗೆ ಸಮ ಪಾಲು ಬೇಕೆಂದಿತು. ಅದನ್ನು ಒಪ್ಪದ ಚಿರತೆ ತನ್ನ ಬೇಟೆಯನ್ನು ಉಳಿಸಿಕೊಳ್ಳಲು ಹೋರಾಡತೊಡಗಿತು. ಈ ಎರಡು ಪ್ರಾಣಿಗಳು ತಮ್ಮ ಹೋರಾಟದ ನಡುವೆ ಸಿಕ್ಕಿದ ಮರಿ ಜಿಂಕೆಯನ್ನು ಮರೆತುಬಿಟ್ಟವು. ಇದನ್ನೇ ಕಾಯುತ್ತ ಹೊಂಚು ಹಾಕುತ್ತಿದ್ದ ಗುಳ್ಳೆನರಿಯೊಂದು ಜಿಂಕೆಯನ್ನು ಪಕ್ಕದ ಪೊದೆಯೊಂದರ ಬಳಿಗೆ ಎಳೆದೊಯ್ದು ಸುಗ್ರಾಸ ಭೋಜನ ಮಾಡಿತು.

ಇತ್ತ ಹೋರಾಡುತ್ತಿದ್ದ ಪ್ರಾಣಿಗಳೆರಡೂ ಸುಸ್ತಾಗಿ ಬೇಟೆಯನ್ನು ಹಂಚಿಕೊಳ್ಳಲು ರಾಜಿ ಮಾಡಿಕೊಂಡವು. ಆದರೆ ಎಲ್ಲಿ ಹುಡುಕಿದರೂ ಬೇಟೆಯಾಡಿದ್ದ ಜಿಂಕೆ ಮರಿ ಕಾಣಿಸಲಿಲ್ಲ. ಆಗ ಪಕ್ಕದ ಪೊದೆಯಿಂದ ಗುಳ್ಳೆನರಿಯೊಂದು ಜಿಂಕೆ ಮರಿಯನ್ನು ಮೆದ್ದು ಖುಷಿಯಿಂದ ಹಲ್ಲು ಕಿರಿಯುತ್ತಾ ಓಡಿಹೋಯಿತು.

ಆಗ ಈ ಎರಡು ಪ್ರಾಣಿಗಳು ತಮ್ಮ ಮೂರ್ಖತನಕ್ಕೆ ಪಶ್ಚಾತ್ತಾಪಪಡುತ್ತ ಹೊಸ ಬೇಟೆ ಹುಡುಕಿಕೊಂಡು ಹೊರಟವು. ಪರಸ್ಪರ ಹಂಚಿ ತಿನ್ನುವ ಗೆಳೆತನವನ್ನು ಕಾಪಾಡಿಕೊಂಡಿದ್ದರೆ ಆಹಾರವಿಲ್ಲದೆ ಪರಿತಪಿಸುವ ಸ್ಥಿತಿ ಅವುಗಳಿಗೆ ಬರುತ್ತಿರಲಿಲ್ಲ.

**-ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು**

---

# ಬೊಂಬೆ ಬೋರಣ್ಣಾ



ಬೊಂಬೆ
ಮಾರುವ
ಬೋರಣ್ಣಾ
ಬಂದಿಹ...
ವಿಧ–ವಿಧ
ತರ ತರದ
ಬಣ್ಣ–ಚೆಂದದ
ಬೊಂಬೆಗಳ ತಂದಿಹ!
ಲಾಗಾ ಹಾಕೋ
ಮಂಗಣ್ಣಾ...
ಕಣ್ಣು ಮಿಟುಕಿಸೋ
ಕೆಂಚಣ್ಣಾ....
ರಾಮಾ–ಸೀತಾ
ಲಕ್ಷ್ಮಣ...
ನಂಬಿಕೆ ಭಂಟ
ಹನುಮಣ್ಣಾ!

ಕ್ಕೋ... ಕ್ಕೋ... ಕ್ಕೋ...
ಕೂಗುವ
ಕೋಳಿಯುಂಟು
ನೋಡಣ್ಣಾ...
ಸೊಂಡಿಲ
ಬೀಸುತ
'ಘೀ....'ಳಿಡುವ
ಆನೆಯಣ್ಣಾ!
ಬಂದಿಹ ಆಟಿಕೆ
ಮಾರುವ ಬೋರಣ್ಣಾ...
ಚಿಣ್ಣರ ಮನವ
ಕದಿಯುವನಣ್ಣ

**-ಅಮರಯ್ಯಾ ಪತ್ರಿಮಠ, ಸುರಪುರ**